# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಶೇಷ ಆಯುಕ್ತರು (ಆಡಳಿತ) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 002**

ಸಂಖ್ಯೆ:ಹೆ.ನಿ.(ನ.ಯೋ)/ಪಿ.ಆರ್/652/2020–21 ದಿನಾಂಕ: 24-12-2020

**ಆಂತರಿಕ ಕಛೇರಿ ಟಿಪ್ಪಣಿ**

ರವರಿಗೆ,
ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ)
ಸಹಾಯಕ ನಿರ್ದೇಶಕರು (ನಗರ ಯೋಜನೆ – ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿನಗರ / ಪೂರ್ವ / ಪಶ್ಚಿಮ / ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯ

ವಿಷಯ:– ಮಂಜೂರಾತಿ ನಕ್ಷೆಯ ವಿವರಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (bbmp.gov.in) ಪ್ರಚುರಪಡಿಸುವ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 2019–20 ಮತ್ತು 2020–21 ನೇ ಸಾಲಿನಲ್ಲಿ ನೀಡಿರುವ ನಕ್ಷೆ ಮಂಜೂರಾತಿಯ ವಿವರಗಳನ್ನು ಮಂಜೂರಾದ ನಕ್ಷೆಯೊಂದಿಗೆ (Site Plan) ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವಂತೆ ಸೆಪ್ಟೆಂಬರ್ ಮಾಹೆಯಲ್ಲಿ ಸೂಚಿಸಲಾಗಿತ್ತು.

ಈ ಸಂಬಂಧ ಪರಿಶೀಲಿಸಲಾಗಿ, ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಿರುವ ಮಾಹಿತಿಯು ಅಪೂರ್ಣವಾಗಿರುವುದು ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ: 24–12–2020 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಾಲಿಕೆಯಿಂದ 2019–20 ಮತ್ತು 2020–21 ನೇ ಸಾಲಿನಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯ ವಿವರಗಳನ್ನು ಮಂಜೂರಾದ ನಕ್ಷೆಯೊಂದಿಗೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವಂತೆ ಸೂಚಿಸಿರುತ್ತಾರೆ.

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2019–20 ಮತ್ತು 2020–21 ನೇ ಸಾಲಿನಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯ ವಿವರಗಳನ್ನು ಈ ಕೆಳಕಂಡ ನಮೂನೆಯ ರೀತ್ಯಾ ತಯಾರಿಸಿ ಮಂಜೂರಾದ ನಕ್ಷೆಯೊಂದಿಗೆ (Site Plan) **ದಿನಾಂಕ: 15–01–2021 ರ ಒಳಗಾಗಿ ಬಿಬಿಎಂಪಿ ವೆಬ್‌ಸೈಟ್‌ನ https://bbmp.gov.in/buildingplansanctiondetails.html ರಲ್ಲಿ ತುರ್ತಾಗಿ ಪ್ರಚುರಪಡಿಸುವಂತೆ** ಸೂಚಿಸಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರುಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಿ, ಮಾನ್ಯ ಆಯುಕ್ತರು ರವರಿಗೆ ವರದಿ ಸಲ್ಲಿಸಲಾಗುವುದು.

**ನಮೂನೆ**

| LIST OF PLAN SANCTIONED ISSUED BY _____ OFFICE, BBMP | | | | | | |
|---|---|---|---|---|---|---|
| DURING THE YEAR ___ | | | | | | |
| SL NO. | LP NO, OWNER NAME AND PROPERTY ADDRESS | WARD NO. | USE OF BUILDING | NO.OF FLOORS | DATE OF PLAN ISSUED | View Site Plan |
| 1 | 2 | 3 | 4 | 5 | 6 | 7 |
| | | | | | | |

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Office of the IT Advisor ★ Bruhat Bengaluru Mahanagara Palike
No. 1045
Date 29-12-2020

ಪ್ರತಿಯನ್ನು

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿನಗರ / ಪೂರ್ವ / ಪಶ್ಚಿಮ / ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯ) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
4. ಸಲಹೆಗಾರರು, ಮಾಹಿತಿ ತಂತ್ರಜ್ಞಾನ ರವರಿಗೆ ಕಳುಹಿಸುತ್ತಾ, ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ನಮೂನೆ ರೀತ್ಯಾ ಕಳುಹಿಸುವ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಕೋರಿದೆ.
5. ಕಛೇರಿ ಪ್ರತಿ.